# ತುಳಿದವರ ನಡುವೆ ಎದ್ದು ನಿಂತಿದ್ದೇನೆ

## ವಿರಾಟ್ ವತ್ಸಲ್

ಸ್ಟಾರ್ ಸುವರ್ಣ
'ಸಂಘರ್ಷ'ದ ವಿಶ್ವ

◆ **ಈ ಕತೆಯಲ್ಲಿ ನಿಮ್ಮ ಪಾತ್ರದ ಮಹತ್ವ ಏನು?**

ನನ್ನ ಅದೃಷ್ಟ ಅನ್ನಿಸುತ್ತದೆ. ಸದ್ಯದ ಪರಿಸ್ಥಿತಿಯಲ್ಲಿ ಸಂಪೂರ್ಣ ನಮ್ಮ ಜೋಡಿ ಪಾತ್ರಗಳ ಮೇಲೆಯೇ ಕಥೆ ಸಾಗುತ್ತಿದೆ. ವಿಶ್ವ ಮತ್ತು ಅನಘಾ ಜೋಡಿ ಕಥೆಯನ್ನು ಆವರಿಸಿವೆ. ಅನಘಾ ಭೈರಾದೇವಿ ಮಗಳು ಎನ್ನುವುದು ಗೊತ್ತಾಗಿದೆ. ಅದು ನನ್ನ ಅಕ್ಕನಿಗೂ ಗೊತ್ತಿದೆ. ಆದರೆ ನನ್ನ ಅಕ್ಕನ ಪ್ರೇಮಿ ಭೈರಾದೇವಿಯ ಮಗ ಎನ್ನುವುದು ಯಾರಿಗೂ ಗೊತ್ತಿಲ್ಲ. ಅನಘಾಳ ನಡುವಿನ ಸ್ನೇಹ ಮತ್ತು ನಮ್ಮಿಬ್ಬರ ಕುಟುಂಬಗಳ ನಡುವಿನ ಸಂಘರ್ಷ ವೀಕ್ಷಕರಲ್ಲಿ ಹೆಚ್ಚು ಕುತೂಹಲವನ್ನು ಹುಟ್ಟಿಸಿದೆ. ಕಥೆ ಕೂಡ ಅದಕ್ಕೆ ಪೂರಕವಾಗಿಯೇ ಇದೆ.

◆ **ಅಭಿನಯಕ್ಕೆ ಪ್ರೇರಣೆ ಆಗಿದ್ದು ಏನು?**

ವೃತ್ತಿಯಿಂದ ಡಾನ್ಸ್ ಕೊರಿಯೋಗ್ರಾಫರ್. ಏಳು ವರ್ಷದ ಹಿಂದೆ ದಾವಣಗೆರೆಯಲ್ಲಿ ಡಾನ್ಸ್ ಶಾಲೆಯನ್ನು ಆರಂಭಿಸಿದೆ. ನನಗಾಗ ಹತ್ತೊಂಬತ್ತು ವರ್ಷ. ಬಣ್ಣದ ಗೀಳು ಆರಂಭದಿಂದಲೂ ಇತ್ತು. ಅದಕ್ಕೆ ಚಿಕ್ಕಪ್ಪ ನಂದಕಿಶೋರ್ ಕೂಡ ಕಾರಣ. ಅವರು ಸಿನಿಮಾ ನಿರ್ದೇಶಕರಾಗಿದ್ದಾರೆ. ಅಮ್ಮ ನಾಗವೇಣಿ ವೃತ್ತಿ ರಂಗಭೂಮಿ ಕಲಾವಿದೆ. ಅವರು ತಮ್ಮ 12ನೇ ವರ್ಷದಿಂದಲೇ ನಟನೆಯನ್ನು ಆರಂಭಿಸಿದ್ದಾರೆ. ತಂದೆ ನಾನು ತುಂಬ ಚಿಕ್ಕವನಿದ್ದಾಗಲೇ ನಮ್ಮನ್ನು ಅಗಲಿದ್ದಾರೆ. ಅಮ್ಮನೇ ನನ್ನನ್ನು ಕಷ್ಟ ಪಟ್ಟು ಸಾಕಿದರು. ಅವರಿಗೆ ವರ್ಷದಲ್ಲಿ ಮೂರ್ನಾಲ್ಕು ತಿಂಗಳು ಮಾತ್ರ ಕೆಲಸ ಇರ್ತಾ ಇತ್ತು. ಜೀವನದಲ್ಲಿ ತುಂಬ ಕಷ್ಟದಿಂದಲೇ ಬೆಳೆದು ಬಂದಿದ್ದೇನೆ. ಅಮ್ಮನಿಗೆ ನಾನು ಬಣ್ಣ ಹಚ್ಚುವುದು ಇಷ್ಟ ಇರಲಿಲ್ಲ. ನನಗೆ ಓದಿಗಿಂತ ಸಾಂಸ್ಕೃತಿಕ ಚಟುವಟಿಕೆಯೇ ಇಷ್ಟ. ಶಿವಮೊಗ್ಗ ರಾಮಕೃಷ್ಣ ಆಶ್ರಮದಲ್ಲಿ ಏಳು ವರ್ಷ ಓದಿದ್ದೆ. ನಮ್ಮ ಹಾಸ್ಟೆಲ್ ಮತ್ತು ಶಾಲೆಯಲ್ಲಿ ಏನೇ ಕಾರ್ಯಕ್ರಮ ಇದ್ದರೂ ನಾನೇ ಮುಂದೆ ಇರ್ತಾ ಇದ್ದೆ. ಒಮ್ಮೊಮ್ಮೆ ತಲಾ ಹತ್ತು ಕಾರ್ಯಕ್ರಮಗಳನ್ನು ನೀಡುತ್ತಿದ್ದೆ. ಡಾನ್ಸ್ ಪ್ಯಾಶನ್ ಆಗಿ ಅದೇ ವೃತ್ತಿಯಾಗಿ ಕೊನೆಗೆ ನಟನೆಯತ್ತ ತಿರುಗಿದೆ. ಓದುತ್ತಲೇ ಹವ್ಯಾಸವನ್ನು ವೃದ್ಧಿಸಿಕೊಂಡು ಹೋಗುತ್ತಿದ್ದೆ. ಅಮ್ಮ ನನಗೆ ಬೆಂಬಲಿಸುತ್ತಲೇ ಬಂದಿದ್ದಾರೆ. ಇದೆಲ್ಲ ನಟನೆಗೆ ಬರಲು ಕಾರಣ ಇದೇ ನನ್ನ ಮೊದಲ ಧಾರಾವಾಹಿ.

◆ **ತೆರೆಯ ಹಿಂದೆ ಮತ್ತು ಮುಂದೆ ನಿಮಗೆ ಯಾವ ರೀತಿ ಕಾಣುತ್ತಿದೆ?**

ತೆರೆಯ ಹಿಂದೆ ಸಾಮಾನ್ಯರಾಗಿ ಇರುತ್ತೇವೆ. ತೆರೆಯ ಮೇಲೆ ಬಂದು ಹೋದಾಗ ಎಲ್ಲೋ ನಮ್ಮನ್ನು ನಾವು ಕಟ್ಟಿಹಾಕಿಕೊಳ್ಳುತ್ತೇವೆ. ಅಂದರೆ ಯಾರೋ ನಮ್ಮನ್ನು ಗುರುತಿಸುತ್ತಾರೆ. ನಮಗೊಂದು ಐಡೆಂಟಿಟಿ ಇರುತ್ತದೆ. 'ವಿಶ್ವ ನೀವು ಚೆನ್ನಾಗಿ ಮಾಡ್ತೀರಿ' ಎಂದು ಯಾರೋ ಹೇಳಿದಾಗ ಖುಷಿ ಅನ್ನಿಸುತ್ತದೆ. ಯಾವುದೇ ಒಬ್ಬ ಕಾಲಾವಿದನಿಗೆ ಅಂತರಾಳದ ಬಯಕೆ ಜನಪ್ರಿಯತೆಯೇ ಆಗಿರುತ್ತದೆ. ಬೇರೆಯವರೂ ನಮ್ಮ ನಟನೆಯನ್ನು ಇಷ್ಟಪಡಬೇಕು ಎನ್ನುವುದಾಗಿರುತ್ತದೆ. ಮೊದಲ ಹಂತದಲ್ಲಿಯೇ ಆ ಅದೃಷ್ಟ ನನಗೆ ಸಿಕ್ಕಿದೆ. ಅದನ್ನು ಉಳಿಸಿಕೊಂಡು ಹೋಗಬೇಕು. ತರೆಯ ಹಿಂದೆ ಇಂತಹ ಮಾನ್ಯತೆ ಸಿಗಲಾರದು ಎಂದು ನಾನು ಅಂದುಕೊಂಡಿದ್ದೇನೆ.

◆ **ಮುಂದಿನ ಪಾತ್ರದ ನಿರೀಕ್ಷೆ ಹೇಗಿದೆ?**

ಇದೇ ರೀತಿ ಇರಬೇಕು ಎಂದು ಯೋಚಿಸಿಲ್ಲ. ಅದು ಅವತ್ತಿನ ಸಮಯ ಹೇಗಿರುತ್ತದೆಯೋ ಗೊತ್ತಿಲ್ಲ. ಯಾವುದೇ ಪಾತ್ರ ಬಂದರೂ ಅದನ್ನು ಟ್ರೆಂಡ್ ಮಾಡಬೇಕು. ಯಾವ ಪಾತ್ರ ಮಾಡಿದರೂ ಅದು ಆ ಸಮಯಕ್ಕೆ ಟ್ರೆಂಡ್ ಸೃಷ್ಟಿಸಬೇಕು. ಹಾಗೆ ಆಗಬೇಕು ಎಂದರೆ ಅದಕ್ಕೆ ಪೂರ್ವ ತಯಾರಿ ಚೆನ್ನಾಗಿ ಇರಬೇಕು. ಮುಂದೆ ಸಿನಿಮಾ ಕಡೆ ಗಮನ ಹರಿಸಬೇಕು ಎಂದುಕೊಂಡಿದ್ದೇನೆ. ಆದರೆ, ಸಿದ್ಧತೆ ಇಲ್ಲದೆ ಹೋಗುವುದು ಬೇಡ ಎನ್ನುವ ಆಲೋಚನೆ ನನ್ನದು. ಧಾರಾವಾಹಿಯಲ್ಲಿ ಕಲಿಯುವುದು ತುಂಬ ಇರುತ್ತದೆ. ಸಣ್ಣ ಸಣ್ಣ ಸಂಗತಿಗಳನ್ನೂ ಕಲಿಯುತ್ತಾ ಬೆಳೆಯಬೇಕು. ಜನ ನೋಡಿದರೆ ಕಲಿತಿದ್ದಾನೆ– ಬೆಳೆದಿದ್ದಾನೆ ಅಂದುಕೊಳ್ಳಬೇಕು.

◆ **ನಿಮ್ಮ ಹವ್ಯಾಸಗಳ ಬಗ್ಗೆ ಹೇಳಿ?**

ಕ್ರಿಕೆಟ್ ಆಡ್ತೀನಿ. ಹಾಡುತ್ತೇನೆ. ಓದುವುದು ಅಷ್ಟು ಒಗ್ಗುವುದಿಲ್ಲ. ಜಿಮ್ ಮಾಡ್ತೀನಿ. ಡಾನ್ಸ್ ಮಾಡುತ್ತೇನೆ. ತುಂಬ ಕಷ್ಟಪಟ್ಟು ಬೆಳೆದಿದ್ದೇನೆ. ಬೆಳೆದ ಹಾದಿ ತಿರುಗಿ ನೋಡಿದರೆ ಖುಷಿಯಾಗುತ್ತದೆ. ಒಂದೆರಡು ಕಿರುಚಿತ್ರಗಳನ್ನು ಮಾಡಿದ್ದೆ. ಶಾಲಾ ದಿನಗಳಲ್ಲಿ ಯಕ್ಷಗಾನ, ಜನಪದ ನೃತ್ಯ, ಕರಾಟೆ ಮಾಡ್ತಾ ಇದ್ದೆ. ತುಂಬ ಹೋರಾಟ ಮಾಡಿಕೊಂಡು ಬಂದಿದ್ದೇನೆ. ಹಣಕಾಸಿನಿಂದಲೂ ಕೆಲವರಿಂದ ತೊಂದರೆಯನ್ನು ಅನುಭವಿಸಿದ್ದೇನೆ. ಒಟ್ಟಾರೆ ತುಳಿಯುವವರ ನಡುವೆ ಎದ್ದು ನಿಂತಿದ್ದೇನೆ. ಇದು ನನಗೆ ಮೊದಲ ಅವಕಾಶ ಇರಬಹುದು. ಈ ಅವಕಾಶ ಪಡೆಯುವುದರ ಹಿಂದೆ ಕೂಡ ದೀರ್ಘ ಪರಿಶ್ರಮ ಇದೆ. ಅಭಿನಯದ ಅವಕಾಶಕ್ಕಾಗಿ ಹಲವಾರು ಆಡಿಷನ್‌ಗಳನ್ನು ನೀಡಿದ್ದೇನೆ.

■ **ರಾಘವೇಂದ್ರ ಕೆ.**

